# ರಾಮಕೃಷ್ಣ ಮಹಾಸಂಘದ ನೂತನ ಪರಮಾಧ್ಯಕ್ಷರು

**ಪರಮಪೂಜ್ಯ ಸ್ವಾಮಿ ಗಹನಾನಂದಜಿಯವರು** ರಾಮಕೃಷ್ಣ ಮಹಾಸಂಘದ ೧೪ನೇ ಪರಮಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ೧೯೯೨ರ ಏಪ್ರಿಲ್‌ನಿಂದ ಮಹಾಸಂಘದ ಉಪಾಧ್ಯಕ್ಷರಾಗಿದ್ದ ಇವರು ಏಪ್ರಿಲ್ ೨೫, ೨೦೦೫ರಂದು ಮಹಾಸಮಾಧಿ ಹೊಂದಿದ ಪೂಜ್ಯ ಸ್ವಾಮಿ ರಂಗನಾಥಾನಂದಜಿಯವರ ನಿಧನದಿಂದ ತೆರವಾದ ಸ್ಥಾನವನ್ನು ತುಂಬುತ್ತಿದ್ದಾರೆ.

ಪರಮಪೂಜ್ಯರು ಈಗ ಬಾಂಗ್ಲಾದೇಶದಲ್ಲಿರುವ ಸಿಲ್ಹೆಟ್ ಜಿಲ್ಲೆಯ ಪಹಾರ್‌ಪುರ್ ಎಂಬ ಗ್ರಾಮದಲ್ಲಿ ೧೯೧೬ರಲ್ಲಿ ಜನಿಸಿದರು. ತಮ್ಮ ವಿದ್ಯಾರ್ಥಿದೆಸೆಯಿಂದಲೇ ಭಗವಾನ್ ಶ್ರೀರಾಮಕೃಷ್ಣರ ಮತ್ತು ಸ್ವಾಮಿ ವಿವೇಕಾನಂದರ ಉಪದೇಶಗಳಿಂದ ಆಕರ್ಷಿತರಾದರು. ವಿದ್ಯಾರ್ಥಿದಿನಗಳಿಂದಲೇ ರಾಮಕೃಷ್ಣ ಮಹಾಸಂಘದ ಯತಿಶ್ರೇಷ್ಠರ ತ್ಯಾಗಮಯ ಹಾಗೂ ನಿಸ್ವಾರ್ಥ ಜೀವನ ಪೂಜ್ಯರನ್ನು ತೀವ್ರವಾಗಿ ಆಕರ್ಷಿಸಿತ್ತು. ಪೂರ್ವಾಶ್ರಮದಲ್ಲಿ ಇವರ ಸಂಬಂಧಿಕರಾಗಿದ್ದ ಹಾಗೂ ವಿಶೇಷವಾಗಿ ತ್ಯಾಗಮಯ ಜೀವನಕ್ಕೆ ಆಗಿನ ದಿನಗಳಲ್ಲಿ 'ಕೇತಕಿ ಮಹಾರಾಜ್' ಎಂದೇ ಪ್ರಸಿದ್ಧರಾಗಿದ್ದ ಅಂದಿನ ಸ್ವಾಮಿ ಪ್ರಭಾನಂದಜಿಯವರಿಂದ ಪೂಜ್ಯ ಸ್ವಾಮಿ ಗಹನಾನಂದಜಿಯವರು ತೀವ್ರವಾಗಿ ಪ್ರಭಾವಿತರಾಗಿದ್ದಾರೆ. ಭಗವಾನ್ ಶ್ರೀರಾಮಕೃಷ್ಣರ ಪ್ರತ್ಯಕ್ಷ ಶಿಷ್ಯರಾದ ಸ್ವಾಮಿ ಅಭೇದಾನಂದಜಿಯವರನ್ನೂ ಒಮ್ಮೆ ನೋಡುವ ಸುಯೋಗ ಇವರಿಗೊದಗಿತ್ತು.

ತಮ್ಮ ೨೨ನೇ ವಯಸ್ಸಿನಲ್ಲಿ ೧೯೩೮ರಲ್ಲಿ ಭುವನೇಶ್ವರದಲ್ಲಿನ ರಾಮಕೃಷ್ಣ ಮಹಾಸಂಘದ ಶಾಖೆಯನ್ನು ಸೇರಿದ ಪೂಜ್ಯರಿಗೆ ಮಹಾಸಂಘದ ಆಗಿನ ಅಧ್ಯಕ್ಷರಾಗಿದ್ದ ಸ್ವಾಮಿ ವಿರಜಾನಂದಜಿ ಅವರಿಂದ ಮಂತ್ರದೀಕ್ಷೆಯಾಯಿತು. ಅನಂತರ ಅವರಿಂದಲೇ ೧೯೪೪ರಲ್ಲಿ **ಅಮೃತಚೈತನ್ಯ** ಎಂಬ ಹೆಸರಿನೊಡನೆ ಬ್ರಹ್ಮಚರ್ಯದೀಕ್ಷೆಯೂ ೧೯೪೮ರಲ್ಲಿ **ಸ್ವಾಮಿ ಗಹನಾನಂದ** ಎಂಬ ಹೆಸರಿನೊಡನೆ ಸಂನ್ಯಾಸ ದೀಕ್ಷೆಯೂ ದೊರೆಯಿತು.

ಆರಂಭದ ದಿನಗಳಲ್ಲಿ ಪೂಜ್ಯರಿಗೆ ಭುವನೇಶ್ವರದ ಆಶ್ರಮದಲ್ಲಿ ಸ್ವಾಮಿ ನಿರ್ವಾಣಾನಂದಜಿಯವರಿಂದ (ನಂತರದ ದಿನಗಳಲ್ಲಿ ಸಂಘದ ಉಪಾಧ್ಯಕ್ಷರು) ಸ್ಫೂರ್ತಿಯುತ ಮಾರ್ಗದರ್ಶನ ದೊರೆಯಿತು. ಪುರೀ ಕ್ಷೇತ್ರಕ್ಕೆ ಭೇಟಿಯಿತ್ತಿದ್ದ ಮಹಾಸಂಘದ ೭ನೇ ಪರಮಾಧ್ಯಕ್ಷರಾಗಿದ್ದ ಸ್ವಾಮಿ ಶಂಕರಾನಂದಜಿ ಹಾಗೂ ಸ್ವಾಮಿ ವಿವೇಕಾನಂದರ ಶಿಷ್ಯರೂ ಸಂಘದ ಉಪಾಧ್ಯಕ್ಷರೂ ಆಗಿದ್ದ ಸ್ವಾಮಿ ಅಚಲಾನಂದಜಿ ಮೊದಲಾದ ಹಿರಿಯ ಯತಿಗಳ ಸೇವೆ ಮಾಡುವ ಅಪೂರ್ವ ಸುಯೋಗವೂ ಇವರಿಗೆ ಲಭಿಸಿತ್ತು. ಅನಂತರ ೧೯೪೨ರಿಂದ ಹತ್ತು ವರ್ಷಗಳ ಕಾಲ ಕೊಲ್ಕತಾದ ಅದ್ವೈತ ಆಶ್ರಮದಲ್ಲಿ ಸೇವೆ ಸಲ್ಲಿಸಿದ ಪೂಜ್ಯರು ಈ ಅವಧಿಯಲ್ಲಿ ಆಗಾಗ ಹಿಮಾಲಯದ ಮಾಯಾವತಿಯಲ್ಲಿರುವ ಅದ್ವೈತ ಆಶ್ರಮದ ಕೇಂದ್ರದಲ್ಲಿ ಏಕಾಂತವಾಸದಲ್ಲಿದ್ದು ಅಧ್ಯಯನ, ಧ್ಯಾನಗಳಲ್ಲಿ ತಪೋನಿರತ ಜೀವನ ನಡೆಸಿದರು.

೧೯೫೩ರಿಂದ ೧೯೫೮ರವರೆಗೆ ಶಿಲ್ಲಾಂಗ್ ಆಶ್ರಮದಲ್ಲಿ ಸ್ವಾಮಿ ಬ್ರಹ್ಮಾನಂದಜಿಯವರ ಶಿಷ್ಯರಾಗಿದ್ದ ಸ್ವಾಮಿ ಸೌಮ್ಯಾನಂದಜಿಯವರ ಮಾರ್ಗದರ್ಶನದಲ್ಲಿ ಸೇವಾಜೀವನ ನಡೆಸಿ, ಈ ಅವಧಿಯಲ್ಲೇ ಹಲವಾರು ಬಾರಿ ಅಸ್ಸಾಂನಲ್ಲಿ ನೆರೆ ಪರಿಹಾರ ಕಾರ್ಯದ ಆಯೋಜನೆಯನ್ನೂ ಮಾಡಿದರು.

ಅನಂತರ ಕೊಲ್ಕತಾದ ರಾಮಕೃಷ್ಣ ಮಿಷನ್ ಸೇವಾಪ್ರತಿಷ್ಠಾನದಲ್ಲಿ ಅದರ ಸಂಸ್ಥಾಪಕ ಕಾರ್ಯದರ್ಶಿ ಸ್ವಾಮಿ ದಯಾನಂದಜಿಯವರ ಮಾರ್ಗದರ್ಶನದಲ್ಲಿ, ಮೊದಲ ಐದು ವರ್ಷಗಳ ಕಾಲ ಆ ಸಂಸ್ಥೆಯ ಸಹಾಯಕ ಕಾರ್ಯದರ್ಶಿಯಾಗಿ, ಬಳಿಕ ೨೨ ವರ್ಷಗಳ ಕಾಲ (೧೯೮೫ರವರೆಗೆ) ಅದರ ಮುಖ್ಯಸ್ಥರಾಗಿ ಸೇವೆ ಸಲ್ಲಿಸಿದರು.

ಆ ಸಂದರ್ಭದಲ್ಲಿ ಸೇವಾಪ್ರತಿಷ್ಠಾನವು ನಡೆಸುತ್ತಿರುವ ಆಸ್ಪತ್ರೆಗೆ ಬರುತ್ತಿದ್ದ ರೋಗಿಗಳ ಮತ್ತು ಸಂತ್ರಸ್ತರ ಸೇವೆಯಲ್ಲಿ ಪೂಜ್ಯರು ತೀವ್ರ ಕಾಳಜಿ ವಹಿಸುತ್ತಿದ್ದರು.

ಕೊಲ್ಕತಾದ ರಾಮಕೃಷ್ಣ ಮಿಷನ್ ಸೇವಾಪ್ರತಿಷ್ಠಾನವು ಮೊದಲಿಗೆ 'ಶಿಶುಮಂಗಲ' ಎಂಬ ಹೆಸರಿನಲ್ಲಿ ಹೆರಿಗೆ ಆಸ್ಪತ್ರೆ ಮತ್ತು ತಾಯಿ-ಮಗುವಿನ ಆರೋಗ್ಯಕ್ಕೆ ಮಾದರಿಯಾದ ವೈದ್ಯಕೀಯ ಕೇಂದ್ರವಾಗಿತ್ತು. ಸಮಾಜದ ಕಡುಬಡವರ ಹಾಗೂ ಆರ್ಥಿಕವಾಗಿ ಹಿಂದುಳಿದವರ ವೈದ್ಯಕೀಯ ಆವಶ್ಯಕತೆಗಳನ್ನು ಪೂರೈಸಲು ಆ ಸಂಸ್ಥೆಯು ಸ್ಥಾಪಿತವಾಗಿತ್ತು. ಅದು ಇಂದು ಸುಸಜ್ಜಿತವಾದ ೫೫೦ ಹಾಸಿಗೆಗಳುಳ್ಳ ಆಧುನಿಕ ಆಸ್ಪತ್ರೆಯಾಗಿ ಮಾರ್ಪಟ್ಟು, ಮಿಷನ್ನಿನ ಅತ್ಯಂತ ಪ್ರತಿಷ್ಠಿತ ವೈದ್ಯಕೀಯ ಕೇಂದ್ರವಾಗಿ ಪರಿವರ್ತಿತವಾಗಿರುವುದು ಪೂಜ್ಯ ಸ್ವಾಮಿ ಗಹನಾನಂದಜಿಯವರ ಅವಿರತ ಶ್ರಮದಿಂದಾಗಿಯೇ ಎಂದು ಹೇಳಬಹುದು. ಈ ಆಸ್ಪತ್ರೆಯ ಸೇವಾವ್ಯಾಪ್ತಿಯನ್ನು ವಿಸ್ತರಿಸಿದ ಪೂಜ್ಯರು ಅತ್ಯಂತ ದುರ್ಗಮವಾದ ದೂರದೂರದ ೩೩ ಗ್ರಾಮಾಂತರ ಸ್ಥಳಗಳಿಗೆ ಸಂಚಾರೀ ವೈದ್ಯಕೀಯ ಸೌಲಭ್ಯಗಳನ್ನು ಕಲ್ಪಿಸಿಕೊಟ್ಟರು. ಹಲವಾರು ಜಾಗಗಳಲ್ಲಿ ನೇತ್ರಚಿಕಿತ್ಸಾ ಶಿಬಿರಗಳನ್ನು ಆಯೋಜಿಸಿದರು. ಪ್ರತಿ ವರ್ಷ ಗಂಗಾಸಾಗರ ಮೇಳದಲ್ಲಿ ಯಾತ್ರಾರ್ಥಿಗಳಿಗೆ ವೈದ್ಯಕೀಯ ನೆರವು ನೀಡಲು ವ್ಯವಸ್ಥೆ ಮಾಡಿದರು. ಬಾಂಗ್ಲಾದೇಶದ ವಿಮೋಚನಾ ಸಮರದ ಅವಧಿಯಲ್ಲಿ ಆಶ್ರಯ ಕೋರಿ ಬಂದವರ ಪರಿಹಾರ ಕಾರ್ಯದಲ್ಲಿ ಕೂಡ ತಮ್ಮನ್ನು ತೀವ್ರವಾಗಿ ಪೂಜ್ಯರು ತೊಡಗಿಸಿಕೊಂಡರು. ಹೀಗೆ ಹಲವಾರು ದಶಕಗಳ ಸೇವಾನಿರತ ಜೀವನ ಪೂಜ್ಯರದಾಗಿದೆ.

೧೯೬೫ರಲ್ಲಿ ರಾಮಕೃಷ್ಣ ಮಠದ ಟ್ರಸ್ಟಿ ಹಾಗೂ ರಾಮಕೃಷ್ಣ ಮಿಷನ್ನಿನ ಆಡಳಿತ ಮಂಡಳಿಯ ಸದಸ್ಯರಾಗಿ ಆಯ್ಕೆಯಾಗಿ, ೧೯೭೯ರಲ್ಲಿ ಅದರ ಸಹಾಯಕ ಕಾರ್ಯದರ್ಶಿಯಾದರು. ಈ ಜವಾಬ್ದಾರಿಯ ಜೊತೆಗೆ ಪೂಜ್ಯರು ಸೇವಾಪ್ರತಿಷ್ಠಾನದ ಕಾರ್ಯದರ್ಶಿಯಾಗಿಯೂ ಸೇವೆ ಸಲ್ಲಿಸುತ್ತಿದ್ದರು. ೧೯೮೯ರಲ್ಲಿ ರಾಮಕೃಷ್ಣ ಮಠ ಮತ್ತು ಮಿಷನ್ನಿನ ಮಹಾಕಾರ್ಯದರ್ಶಿಯಾಗಿ ಆಯ್ಕೆಯಾದ ಪೂಜ್ಯರು ೧೯೯೨ರಲ್ಲಿ ಮಹಾಸಂಘದ ಉಪಾಧ್ಯಕ್ಷರಾಗಿ ನಿಯುಕ್ತರಾದರು. ಆ ಅವಧಿಯಲ್ಲಿ ಅವರು ಕೊಲ್ಕತಾದ ಕಾಂಕುರ್‌ಗಾಚಿಯಲ್ಲಿರುವ ರಾಮಕೃಷ್ಣ ಮಠ ಯೋಗೋದ್ಯಾನದ ಅಧ್ಯಕ್ಷರೂ ಆಗಿದ್ದರು.

ರಾಮಕೃಷ್ಣ ಮಹಾಸಂಘದ ಉಪಾಧ್ಯಕ್ಷರಾಗಿ ಪೂಜ್ಯ ಸ್ವಾಮಿ ಗಹನಾನಂದಜಿಯವರು ದೇಶದ ಹಲವಾರು ಭಾಗಗಳಲ್ಲಿ ವ್ಯಾಪಕವಾಗಿ ಸಂಚರಿಸಿರುವರು. ನೂರಾರು ಮಹಾಸಂಘದ ಕೇಂದ್ರಗಳಿಗೆ ಹಾಗೂ ಖಾಸಗಿ ಆಶ್ರಮಗಳಿಗೆ ಭೇಟಿಯಿತ್ತು ಭಗವಾನ್ ಶ್ರೀರಾಮಕೃಷ್ಣ, ಶ್ರೀಮಾತೆ ಶಾರದಾದೇವಿ, ಸ್ವಾಮಿ ವಿವೇಕಾನಂದರ ಜೀವನ ಹಾಗೂ ವೇದಾಂತದ ಸಂದೇಶಗಳನ್ನು ದೇಶದ ಮೂಲೆಮೂಲೆಗಳಲ್ಲಿಯೂ ಹರಡಿದ್ದಾರೆ. ವಿಶ್ವಧರ್ಮ ಸಮ್ಮೇಳನದಲ್ಲಿ ಸ್ವಾಮಿ ವಿವೇಕಾನಂದರ ಐತಿಹಾಸಿಕ ಪ್ರಭಾವದ ಶತಮಾನೋತ್ಸವವನ್ನು ಆಚರಿಸಲು ೧೯೯೩ರಲ್ಲಿ ಚಿಕಾಗೋದಲ್ಲಿ ಏರ್ಪಡಿಸಿದ್ದ ಧರ್ಮಸಮ್ಮೇಳನದ ಸಭೆಯಲ್ಲಿ ಪೂಜ್ಯರು ರಾಮಕೃಷ್ಣ ಮಹಾಸಂಘವನ್ನು ಪ್ರತಿನಿಧಿಸಿದ್ದರು. ಅದರಲ್ಲಿ ಸುಮಾರು ೬,೫೦೦ ಜನರು ಪಾಲ್ಗೊಂಡಿದ್ದರು. ಬೇರೆಬೇರೆ ಸಮಯಗಳಲ್ಲಿ ವಿದೇಶಯಾತ್ರೆಯನ್ನು ಕೈಗೊಂಡು, ಅಮೆರಿಕ, ಕೆನಡಾ, ಇಂಗ್ಲೆಂಡ್, ಫ್ರಾನ್ಸ್, ಸ್ವಿಟ್ಜರ್‌ಲ್ಯಾಂಡ್, ಹಾಲೆಂಡ್, ರಷ್ಯಾ, ಆಸ್ಟ್ರೇಲಿಯಾ, ಜಪಾನ್, ಮ್ಯನ್ಮಾರ್, ಶ್ರೀಲಂಕಾ, ಬಾಂಗ್ಲಾದೇಶ, ಸಿಂಗಪೂರ್, ಮಲೇಷ್ಯಾ ಮತ್ತು ಮಾರಿಷಸ್ ದೇಶಗಳ ವಿವಿಧ ಸ್ಥಳಗಳಿಗೆ ಪೂಜ್ಯರು ಭೇಟಿಯಿತ್ತಿದ್ದಾರೆ. ಆ ಎಲ್ಲ ಕಡೆಗಳಲ್ಲಿ ವೇದಾಂತ ಸಂದೇಶದ ಪ್ರಸಾರಕಾರ್ಯವನ್ನು ಕೈಗೊಂಡು ಭಗವಾನ್ ಶ್ರೀರಾಮಕೃಷ್ಣರ ಹೆಸರಿನಲ್ಲಿ ಮಂತ್ರದೀಕ್ಷೆಯನ್ನಿತ್ತಿದಾರೆ. ದೇಶದ ಯಾವುದೇ ಮೂಲೆಯಿಂದ ಆಧ್ಯಾತ್ಮಿಕ ಮಾರ್ಗದರ್ಶನಕ್ಕಾಗಿ ಬೇಡಿಕೆ ಬಂದಾಗ ತಮಗಾಗುವ ಯಾವುದೇ ವೈಯಕ್ತಿಕ ಕಷ್ಟ ಅನಾನುಕೂಲತೆಗಳನ್ನೂ ಲೆಕ್ಕಿಸದೆ ಸಾಧಕರ ಕೋರಿಕೆಗಳಿಗೆ ಸ್ಪಂದಿಸುತ್ತಾ ಬಂದಿರುವುದು ಪೂಜ್ಯ ಸ್ವಾಮಿ ಗಹನಾನಂದಜಿಯವರ ವೈಶಿಷ್ಟ್ಯವಾಗಿದೆ.